**ಓ ಎಸ್ ನಂಃ 10/2015**
**ಡಿ ಡಬ್ಲ್ಯು ಃ 1**

**ದಿಃ 08.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ. ಎಸ್ ಆರ್ ಎನ್ ವಕೀಲರಿಂದಃ-**

ಅಸಲು ದಾವಾ ಸಂಖ್ಯೆ 833/2014ರ ರಾಜಿ ಅರ್ಜಿಯಂತೆ ಸದರಿ ದಾವೆಯ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ನಮ್ಮ ತಂದೆಯವರು ಮಾಲೀಕರೆಂದು ತೀರ್ಮಾನಿಸಲಾಗಿದೆ. ಸದರಿ ರಾಜಿ ಅರ್ಜಿಯಲ್ಲಿ ಎಲ್ಲಿಯೂ ಸಹ ತಮ್ಮ ತಂದೆಯಾಗಲಿ ಅಥವಾ ಮಲ್ಲಯ್ಯ ಮತ್ತು ಕುಟುಂಬದವರು ಮಾಲೀಕರು ಎಂದು ತೀರ್ಮಾನ ಆಗಿಲ್ಲ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಗಳು ಒಂದೇ ಕುಟುಂಬದ ಸದಸ್ಯರು ಎಂದರೆ ಸರಿಯಲ್ಲ. ವಾದಿಗಳಿಗೆ ಸೇರಿದ ಸ್ವತ್ತುಗಳನ್ನು ಕಬಳಿಸುವ ಉದ್ದೇಶದಿಂದ ತಮ್ಮ ತಂದೆ ಹಾಗೂ ಮಲ್ಲಯ್ಯ, ಎಲ್ಲಪ್ಪ ಮತ್ತು ರಾಮಲಿಂಗ ರವರು ಅಸಲು ದಾವಾ ಸಂಖ್ಯೆ 833/2014 ರಂತೆ ದಾವೆಯನ್ನು ನ್ಯಾಯಾಲಯದಲ್ಲಿ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ಸದರಿ ದಾವೆಯನ್ನು ಸಲ್ಲಿಸುವುದಕ್ಕಿಂತ ಪೂರ್ವದಲ್ಲಿ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಅಸಲು ದಾವಾ ಸಂಖ್ಯೆ 449/2011 ರಂತೆ ಮಲ್ಲಯ್ಯ ಮತ್ತು ಇತರರ ವಿರುದ್ದ ಶಾಶ್ವತ ನಿರ್ಬಂದಕಾಜ್ಞೆ ಪರಿಹಾರ ಕೋರಿ ದಾವೆ ಸಲ್ಲಿಸಿ ಸದರಿ ದಾವೆಯು ವಾದಿಗಳ ಪರವಾಗಿ ಡಿಕ್ರಿ ಆಗಿದೆ ಎಂದರೆ ಸರಿಯಲ್ಲ. ಸದರಿ ದಾವೆಯ ತೀರ್ಪನ್ನು ನಾವು ಓದಿರುವುದಿಲ್ಲ.

ದಾವಾ ಸ್ವತ್ತುಗಳು ಅಜ್ಜನಹಳ್ಳಿ ದಾಖಲೆಗೆ ಸೇರಿರುತ್ತದೆ. ದಾವಾ ಸ್ವತ್ತುಗಳು ಮಾಗಡಿ ನ್ಯಾಯಾಲಯದ ವ್ಯಾಪ್ತಿಗೆ ಬರುತ್ತವೆ ಎಂದರೆ ಸರಿಯಲ್ಲ. ದಾವಾ ಐಟಂ ನಂ. 1 ರ ಸ್ವತ್ತಿಗೆ ಸಂಬಂಧಪಟ್ಟಂತೆ ಪಹಣಿ ಪತ್ರಿಕೆಗಳು 1999 ರಿಂದ ವಾದಿಗಳ ಹೆಸರಿನಲ್ಲಿವೆ ಎಂದರೆ ಸರಿಯಲ್ಲ. ವಾದಿಗಳು ದಾವಾ ಐಟಂ ನಂ. 1 ರ ಸ್ವತ್ತಿನಲ್ಲಿ 1999 ರಿಂದ ಸ್ವಾಧೀನಾನುಭವದಲ್ಲಿದ್ದು ಅವರೇ ಬೆಳೆಗಳನ್ನು ಬೆಳೆಯುತ್ತಿದ್ದಾರೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರಗಳು ತಮಗೆ ಗೊತ್ತಿದ್ದರೂ ಸಹ ದಿಃ 26.11.1999 ರಂದು ದಾವಾ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ತಾವು ಮರಣ ಶಾಸನ ಪತ್ರವನ್ನು ಸೃಷ್ಟಿ ಮಾಡಿಕೊಂಡಿದ್ದೀರಿ ಎಂದರೆ ಸರಿಯಲ್ಲ. ಪಿ ಅಂಡ್ ಎಸ್ ಸಿ 5/2012 ರ ಅರ್ಜಿಯಲ್ಲಿ ತಾವು ಈ ದಾವೆಯ ವಾದಿಗಳನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸಾಕ್ಷಿಯು ವಾದಿಗಳು ನಮ್ಮ ವಾರಸುದಾರರು ಅಲ್ಲ ಎಂದು ನುಡಿಯುತ್ತಾರೆ. ತಾವು ಈ ದಾವೆಯ ವಾದಿಗಳನ್ನು ಉದ್ದೇಶಪೂರ್ವಕವಾಗಿ ಪಿ ಅಂಡ್ ಎಸ್ ಸಿ 5/2012 ರ ಕೇಸಿನಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ

**ಓ ಎಸ್ ನಂಃ 10/2015**
**ಡಿ ಡಬ್ಲ್ಯೂ ಃ 1**

ಎಂದರೆ ಸರಿಯಲ್ಲ. ತಾವು ಹನುಮಯ್ಯನವರ ಸಂಬಂಧಿಕರಲ್ಲ ಎಂದರೆ ಸರಿಯಲ್ಲ. ಪಿ ಅಂಡ್ ಎಸ್ ಸಿ 5/2012 ರ ಅರ್ಜಿಯಲ್ಲಿ ನ್ಯಾಯಾಲಯಕ್ಕೆ ತಾವು ಸತ್ಯಾಸತ್ಯತೆಯನ್ನು ಮರೆಮಾಚಿ ಆದೇಶ ಪಡೆದಿದ್ದೀರಿ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಹನುಮಯ್ಯನವರ ಜೊತೆ ತಮ್ಮ ತಂದೆ ವಾಸವಾಗಿದ್ದುಕೊಂಡು ಅವರನ್ನು ನೋಡಿಕೊಳ್ಳುತ್ತಿದ್ದರು ಎಂದು ತೋರಿಸಲು ತಾವೇನಾದರೂ ನ್ಯಾಯಾಲಯಕ್ಕೆ ದಾಖಲಾತಿಯನ್ನು ಹಾಜರುಪಡಿಸಿದ್ದೀರ ಎಂದರೆ ಸಾಕ್ಷಿಯು ಪಡಿತರ ಚೀಟಿಯನ್ನು ಹಾಜರುಪಡಿಸಿದ್ದೇವೆ ಎಂದು ನುಡಿಯುತ್ತಾರೆ. ನಿಡಿ 1 ರ ಪಡಿತರ ಚೀಟಿಯಲ್ಲಿ ತಮ್ಮ ತಂದೆಯವರ ಹೆಸರು ಇದೆಯಾ ಎಂದರೆ ಸಾಕ್ಷಿ ಇದೆ ಎಂದು ನುಡಿಯುತ್ತಾರೆ. ನಿಡಿ 1 ರ ಪಡಿತರ ಚೀಟಿಯಲ್ಲಿ ತಾವು ತಮ್ಮ ತಂದೆಯ ಹೆಸರನ್ನು ಬರೆದುಕೊಂಡಿದ್ದೀರಿ ಎಂದರೆ ಸರಿಯಲ್ಲ. ಹನುಮಯ್ಯ ಮತ್ತು ತಮ್ಮ ತಂದೆ ಒಂದೇ ಕುಟುಂಬದವರು ಎಂದು ತೋರಿಸಲು ವಂಶವೃಕ್ಷವನ್ನು ಹಾಜರುಪಡಿಸಿದ್ದೀರ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಮುತ್ತಮ್ಮ, 1 ನೇ ಪ್ರತಿವಾದಿ ಚಿಕ್ಕಮುತ್ತಯ್ಯನವರ ಮಕ್ಕಳು ಎಂದು ತೋರಿಸಲು ವಂಶವೃಕ್ಷವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರ ಎಂದರೆ ಸಾಕ್ಷಿಯು ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ತಮಗೂ ಮತ್ತು ಚಿಕ್ಕಮುತ್ತಯ್ಯನವರ ಕುಟುಂಬದ ಸದಸ್ಯರ ನಡುವೆ ಯಾವುದೇ ರಕ್ತ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸದರಿ ವಿಚಾರಕ್ಕೆ ಸಂಬಂಧಪಟ್ಟಂತೆ ತಾವು ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿಡಿ 3 ರ ಕಂದಾಯ ರಶೀದಿಯನ್ನು ತಾವೇ ಈ ದಾವೆಗೋಸ್ಕರ ಸೃಷ್ಟಿ ಮಾಡಿಕೊಂಡಿದ್ದೀರಿ ಎಂದರೆ ಸರಿಯಲ್ಲ.

ಚಿಕ್ಕಮುತ್ತಯ್ಯನವರಿಗೆ 5 ಜನ ಮಕ್ಕಳು. 1) ಮುತ್ತಮ್ಮ 2) ತಿಮ್ಮಕ್ಕ 3) ಸೋಮಳಯ್ಯ 4) ಮುತ್ತಯ್ಯ 5) ಸಿದ್ದಪ್ಪ.

**ಮುಂದುವರೆದ ಪಾಟೀ ಸವಾಲುಃ ಕಾಲಾವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**